

ಉದ್ದ ಜಡೆಯೆಂದರೆ ಆಸೆಪಡುವ ಕಾಲವೇ ಅದಾಗಿತ್ತು. ಅಮ್ಮ ಚೌರಿ ಸೇರಿಸಿ ದಪ್ಪ, ಉದ್ದದ ಜಡೆ ಹೆಣೆದುಕೊಳ್ಳುತ್ತಿದ್ದಳು. ಅಂದಿನ ಅವಿಭಕ್ತ ಕುಟುಂಬದಲ್ಲಿ ಕನಿಷ್ಠ ನಾಲ್ಕೈದು ಜಡೆ ತಲೆಗಳಂತೂ ಇದ್ದೇ ಇರುತ್ತಿದ್ದವು. ಹೆಂಗಸರೆಲ್ಲಾ ಒಂದೆಡೆ ಕೂತು ತಲೆಬಾಚಿ ಉದುರಿದ ಕೂದಲನ್ನು ಬೆರಳಿಗೆ ಸುತ್ತಿ ಸಿಂಬೆ ಮಾಡಿ ಚೀಲದಲ್ಲಿ ಸಂಗ್ರಹಿಸಿಡುತ್ತಿದ್ದರು. ಚೌರಿ ಮಾರುವವರು, ತಯಾರಿಸಿಕೊಡುವವರು ಮನೆಮನೆಗೂ ಬರುತ್ತಿದ್ದರು. ಯಾರುಯಾರದ್ದೋ ಕೂದಲಿನ ಚೌರಿ ಕೊಳ್ಳಲು ಮನಸ್ಸಾಗದೇ ಕೂಡಿಸಿಟ್ಟ ಕೂದಲನ್ನು ಕೊಟ್ಟು ಚೌರಿ ಮಾಡಿಕೊಡಲು ಹೇಳುತ್ತಿದ್ದೆವು. ಅಲ್ಲೇ ಅಂಗಳದಲ್ಲಿ ಕುಳಿತು ಚಕಚಕನೆ ಚೌರಿ ತಯಾರಿಸುತ್ತಿದ್ದರೆ ಅದ್ಭುತ ವಿದ್ಯೆ ಎಂಬಂತೆ ನೋಡುವುದಷ್ಟೇ ಅಲ್ಲದೆ, ಅವರ ಚೀಲದಲ್ಲಿ ಸಂಗ್ರಹಿಸಿ ತಂದ ಬೇರೆ ಕೂದಲನ್ನೆಲ್ಲಿ ಸೇರಿಸಿಬಿಡುತ್ತಾರೋ ಎಂಬ ಗುಮಾನಿಯಿಂದಾಗಿ ನಿಗಾ ವಹಿಸುವುದೂ ಚಿಲ್ಟಾರಿಗಳ ಘನಕಾರ್ಯವಾಗಿತ್ತು. ಆದರೀಗ ಚೌರಿಯ ಅರ್ಥವನ್ನು ನಿಘಂಟಿನಲ್ಲಿ ಹುಡುಕುವ ಜಮಾನಾ. ಉದ್ದ ಜಡೆ ಬಿಡಿ, ಉದ್ದ ಕೂದಲಿದ್ದವರೂ ಕೂದಲಿಗೆ ಕತ್ತರಿ ಹಾಕಿಸಿ ಪೋನೀಟೇಲ್‌ಗೋ ಅಥವಾ ಕೆದರಿದ ಕೂದಲಿನ ಬಿಚ್ಚಮ್ಮ ಗೆಟಪ್‌ಗೋ ಆತುಕೊಳ್ಳುವುದು ಸಾಮಾನ್ಯವಾಗಿಬಿಟ್ಟಿದೆ.

ಕಾಲೇಜು ದಿನಗಳಲ್ಲಿ ಸುಮಾರು ಮೂರು ಕಿ.ಮೀ. ದೂರದ ಕಾಲೇಜಿಗೆ ನಡೆದೇ ಹೋಗುತ್ತಿದ್ದೆವು. ಪಟಾಲಂ ಕಟ್ಟಿಕೊಂಡು ಕಿಚಾಯಿಸುತ್ತಾ ಹೋಗುತ್ತಿದ್ದರೆ ದಾರಿ ಸವೆದದ್ದೇ ತಿಳಿಯುತ್ತಿರಲಿಲ್ಲ. ಉದ್ದ ಜಡೆಯವರೇನಾದರೂ ಕಂಡರೋ 'ಇವರ ಗುಟ್ಟು ಕೇಶವರ್ಧಿನಿ ತೈಲ' ಎಂದು ವಿಜ್ಞಾಪನೆಯ ರೀತಿಯಲ್ಲಿ ಅಣಕವಾಡುತ್ತಾ ಘನಂದಾರಿ ಜೋಕ್‌ಗೆ ಮುಕ್ತವಾಗಿ ನಗುತ್ತಿದ್ದೆವು. ಸಿನಿಮಾದ ಹಾಡಿನ ದೃಶ್ಯದಲ್ಲಂತೂ ನಾಯಕಿಯದ್ದೊಮ್ಮೆ ಹೆಬ್ಬಾವಿನಂತಹ ದಪ್ಪ ಜಡೆಯಾದರೆ, ಮತ್ತೊಮ್ಮೆ ಮೋಟು ಬಿಚ್ಚುಗೂದಲಿನ ಗೆಟಪ್‌ಗೆ ಕೇಶವರ್ಧಿನಿ ಚೌರಿ ಅಥವಾ ಕೇಶವರ್ಧಿನಿ ಟೋಪನ್ ಎಂದಾಡಿಕೊಳ್ಳುತ್ತಾ ಮತ್ತದೇ ನಗುವಿನಲೆಯಲ್ಲಿ ತೇಲುತ್ತಾ ಸಂಭ್ರಮಿಸುತ್ತಿದ್ದೆವು. ನಗುವಿಗೆಂದೂ ಬರವಿರದ ದಿನಗಳವು.

ಒಂದು ಕಾಲದಲ್ಲಿ ಮರಿ ಹೆಬ್ಬಾವಿನಂತಿದ್ದ ನನ್ನ ಕೇಶರಾಶಿ ಇದೀಗ ಇಲಿ ಬಾಲದಷ್ಟಲ್ಲದಿದ್ದರೂ ಹೆಗ್ಗಣದ ಬಾಲಕ್ಕಂತೂ ಮೋಸವಿಲ್ಲ. ಉಳಿದಿರುವ ನಾಲ್ಕು ಕೂದಲನ್ನೇ ಎಂಟಾಗಿಸುವಂತೆ ಬಾಚುವುದು ಅದ್ಭುತ ಕಲೆ ಮಾತ್ರವಲ್ಲ, ಕಸರತ್ತೂ ಹೌದು. ಹಾಗೆ ಮಾಡುವಾಗಲೆಲ್ಲಾ ಹೇಗ್ಹೇಗೋ ಬಾಚುತ್ತಾ ಸಿಕ್ಕ ಸಿಕ್ಕ ಸೋಪಲ್ಲಿ ತಲೆಗೆರೆದುಕೊಂಡು ಸುಂದರ ನೀಳಗೂದಲನ್ನು ಅಸಡ್ಡೆ ಮಾಡಿದ ಪದವಿಪೂರ್ವ ದಿನಗಳು; ನಂತರದಲ್ಲಿ ಪದವಿ ಕಲಿಕಾ ಹಂತಕ್ಕೆ ಬರುವಷ್ಟರಲ್ಲಿ ಬದಲಾದ ಮನಸ್ಥಿತಿಯತ್ತಲೂ ಚಿತ್ತ ಪದೇಪದೇ ಜಾರಿ ಸುಖಿಸುವುದುಂಟು.

ನಿತಂಬ ಮುಟ್ಟುವ ಸೊಂಪಾದ ನೀಳ ಕೇಶರಾಶಿಗೆ ಭಾನುವಾರಕ್ಕೊಮ್ಮೆ ಅಭ್ಯಂಜನದ ಭಾಗ್ಯ. ಪೂರ್ವಭಾವಿಯಾಗಿ ಹಿಂದಿನ ರಾತ್ರಿಯೇ ಬೆಚ್ಚಗಿನ ಎಣ್ಣೆ ಕೂದಲಿಗೆ ಪೂಸಿ ಅಮ್ಮನ